KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar, Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

KU/Aca(S&T)/SSL-417/2023-24/1246 ದಿನಾಂಕ: 27 OCT 2023

**ನೆನಪೋಲೆ-1**

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿ ಸಂಘದ ಸದಸ್ಯತ್ವಕ್ಕೆ ನೊಂದಣಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ / 24 / ಯುಆರ್‌ಸಿ / 2023, ಬೆಂಗಳೂರು, ದಿ: 07.03.2023.
2. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ಇವರ ಪತ್ರ ಸಂ. ಕರಾಉಶಿಪ / ಹಳೆ ವಿದಾರ್ಥಿ ಸಂಪರ್ಕ ಕಚೇರಿ / 2023-24 / 218, ದಿನಾಂಕ: 03.04.2023.
3. ಪ್ರಾಚಾರ್ಯರ ಸಭೆ ದಿನಾಂಕ: 14.07.2023.
4. ಸಿಂಡಿಕೇಟ್ ಸಭೆ ಠರಾವು ಸಂ. 45, ದಿನಾಂಕ: 30.05.2023.
5. ಕಚೇರಿ ಸುತ್ತೋಲೆ ಸಂ. KU/Aca(S&T)/SSL-417/2023-24/725, ದಿ: 24.07.2023.
6. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 27-10-2023

------

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1 ರಿಂದ 4ರ ವರೆಗೆ ತಿಳಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಸ್ನಾತಕ / ಸ್ನಾತಕೋತ್ತರ / ಡಿಪ್ಲೋಮಾ / ಸರ್ಟಿಫಿಕೇಟ್ / ಪಿಎಚ್.ಡಿ. ತರಗತಿಗಳಲ್ಲಿ ಅಭ್ಯಾಸಿಸುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಸಂಘದ ಸದಸ್ಯರನ್ನಾಗಿಸುವುದು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ, ಸದರಿ ಉಲ್ಲೇಖದ ಪ್ರಕಾರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ನಿರ್ದೇಶಿಸಿದಂತೆ, ಉಲ್ಲೇಖ 5 ರನ್ವಯ ಸುತ್ತೋಲೆ ಮೂಲಕ ಪ್ರತಿ ವಿದ್ಯಾರ್ಥಿಗೆ ರೂ. 300/- ನೊಂದಣಿ ಶುಲ್ಕವನ್ನು ಆಕರಿಸುವುದರೊಂದಿಗೆ ವಿದ್ಯಾರ್ಥಿಗಳನ್ನು ನೊಂದಣಿ ಮಾಡಿಕೊಳ್ಳಲು ತಿಳಿಸಲಾಗಿತ್ತು. ಆದರೆ, ಕೆಲವು ಮಹಾವಿದ್ಯಾಲಯಗಳು ಮಾತ್ರ ವಿದ್ಯಾರ್ಥಿಗಳ ನೊಂದಣಿ ಶುಲ್ಕವನ್ನು ವಿಶ್ವವಿದ್ಯಾಲಯಕ್ಕೆ ಭರಿಸಿದ್ದಾರೆ.

ಆದ್ದರಿಂದ, ಮತ್ತೇ ವಿಳಂಬ ಮಾಡದೆ ಉಲ್ಲೇಖ 5ರ ಸುತ್ತೋಲೆ ಅನ್ವಯ ಪ್ರತಿ ವಿದ್ಯಾರ್ಥಿಗಳಿಂದ ರೂ. 300/- ಗಳನ್ನು ನೊಂದಣಿ ಶುಲ್ಕವನ್ನು ಆಕರಿಸಿ ಕರ್ನಾಟಕ ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಲಭ್ಯವಿರುವ Alumni Portal ನಲ್ಲಿರುವ Registration ನಲ್ಲಿ ಕ್ಲಿಕ್ ಮಾಡಿ College Registration ಆಯ್ಕೆ ಮಾಡಿ ಅವಶ್ಯವುಳ್ಳ ಮಾಹಿತಿಯನ್ನು ಭರ್ತಿ ಮಾಡಿ ಪದವಿವಾರು / ಸೆಮಿಸ್ಟರ್‌ವಾರು ಶುಲ್ಕವನ್ನು SB Collect / UPI ಮುಖಾಂತರ ಶುಲ್ಕವನ್ನು ಭರಿಸುವುದು. ಪದವಿವಾರು, ಸೆಮಿಸ್ಟರ್‌ವಾರುನಂತೆ ವಿದ್ಯಾರ್ಥಿಗಳ ಯಾದಿಯನ್ನು **ದಿನಾಂಕ: 06.11.2023** ರೊಳಗಾಗಿ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ, Silver Jubilee ಕಟ್ಟಡ (CDC Section Building) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಗೆ ಸಲ್ಲಿಸುವುದು.

ಶುಲ್ಕವನ್ನು ಈ ಮೇಲಿನಂತೆ ಪಾವತಿಸಲು ತಾಂತ್ರಿಕ ತೊಂದರೆಗಳೇನಾದರು ಉದ್ಭವಿಸಿದಲ್ಲಿ ಶುಲ್ಕವನ್ನು Alumni Association, Karnatak University ಹೆಸರಿನಲ್ಲಿ ಡಿ.ಡಿ. ಮುಖಾಂತರ ಅಥವಾ Alumni Association, Karnatak University ದ SBI Account No. 30290837214, IFS Code: SBIN0001728 ಗೆ RTGS ಮುಖಾಂತರ ಸಂದಾಯ ಮಾಡುವುದು. ಸದರಿ ಶುಲ್ಕದ ಡಿ.ಡಿ. / RTGS ಚಲನ್ ಹಾಗೂ ವಿದ್ಯಾರ್ಥಿಗಳ ಯಾದಿಗಳನ್ನು ಈ ಮೇಲಿನ ವಿಳಾಸಕ್ಕೆ ಸಲ್ಲಿಸುವುದು.

ಈಗಾಗಲೇ ವಿದ್ಯಾರ್ಥಿಗಳಿಂದ ಪಡೆದಕೊಂಡ ನೊಂದಣಿ ಶುಲ್ಕ ಸದುಪಯೋಗವಾಗಲು ಸಹಕರಿಸಬೇಕೆಂದು ಈ ಮೂಲಕ ಕೋರಲಾಗಿದೆ. ವಿವರಗಳಿಗಾಗಿ ದಿನಾಂಕ: 24.07.2023ರ ಸುತ್ತೋಲೆಯನ್ನು ಗಮನಿಸುವುಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಮಹಾವಿದ್ಯಾಲಯಗಳ ಪ್ರಾಚಾರ್ಯರು, ಕ.ವಿ.ವಿ. ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳು / ಸಂಯೋಜಕರು ಮತ್ತು ಕ.ವಿ.ವಿ. ಸ್ನಾತಕೋತ್ತರ ಕೇಂದ್ರಗಳ ಆಡಳಿತಾಧಿಕಾರಿಗಳಿಗೆ ಈ ಮೂಲಕ ಸೂಚಿಸಲಾಗಿದೆ.

27/10/23
ಕುಲಸಚಿವರು

ಗೆ,
ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು, ಸ್ನಾತಕೋತ್ತರ ಕೇಂದ್ರ (ಗದಗ, ಕಾರವಾರ, ಹಾವೇರಿ) ಆಡಳಿತಾಧಿಕಾರಿಗಳು, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ (ಹಾವೇರಿ ಜಿಲ್ಲೆಯನ್ನೊಳಗೊಂಡು) ಪ್ರಾಚಾರ್ಯರುಗಳು.

**ಪ್ರತಿ:**

1. ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ, Silver Jubilee ಕಟ್ಟಡ (CDC Section Building) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.
3. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು / ಕುಲಸಚಿವರ ಆಪ್ತ ಕಾರ್ಯದರ್ಶಿಗಳು / ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.

KARNATAK UNIVERSITY, DHARWAD
ACADEMIC (S&T) SECTION
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ವಿದ್ಯಾಮಂಡಳ (ಎಸ್&ಟಿ) ವಿಭಾಗ

ಸ್ವಾತಂತ್ರ್ಯದ ಅಮೃತ ಮಹೋತ್ಸವ

Tele: 0836-2215224
e-mail: academic.st@kud.ac.in
Pavate Nagar,Dharwad-580003
ಪಾವಟೆ ನಗರ, ಧಾರವಾಡ – 580003

NAAC Accredited
'A' Grade 2014

website: kud.ac.in

KU/Aca(S&T)/SSL-417/2023-24/725 ದಿನಾಂಕ: 24 JUL 2023

## ಸುತ್ತೋಲೆ

ವಿಷಯ: ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿ ಸಂಘದ ಸದಸ್ಯತ್ವಕ್ಕೆ ನೊಂದಣಿ ಮಾಡಿಕೊಳ್ಳುವ ಕುರಿತು.

ಉಲ್ಲೇಖ:1. ಸರ್ಕಾರದ ಆದೇಶ ಸಂಖ್ಯೆ: ಇಡಿ / 24 / ಯುಆರ್‌ಸಿ / 2023, ಬೆಂಗಳೂರು, ದಿ: 07.03.2023.

2. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಬೆಂಗಳೂರು ಇವರ ಪತ್ರ ಸಂ. ಕರಾಉಶಿಪ / ಹಳೆ ವಿದಾರ್ಥಿ ಸಂಪರ್ಕ ಕಚೇರಿ / 2023–24 / 218, ದಿನಾಂಕ: 03.04.2023.
3. ಪ್ರಾಚಾರ್ಯರ ಸಭೆ ದಿನಾಂಕ: 14.07.2023.
4. ಸಿಂಡಿಕೇಟ್ ಸಭೆ ಠರಾವು ಸಂ. 45, ದಿನಾಂಕ: 30.05.2023.
5. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 24-07-2023

------

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ 1ರ ಕರ್ನಾಟಕ ಸರ್ಕಾರದ ಆದೇಶದನ್ವಯ, ಉಲ್ಲೇಖ 2 ರಲ್ಲಿನ ನಿರ್ದೇಶನದನ್ವಯ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಸ್ನಾತಕ / ಸ್ನಾತಕೋತ್ತರ / ಡಿಪ್ಲೋಮಾ / ಸರ್ಟಿಫಿಕೇಟ್ / ಪಿಎಚ್.ಡಿ. ತರಗತಿಗಳಲ್ಲಿ ಅಭ್ಯಾಸಿಸುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಸಂಘದ ಸದಸ್ಯರನ್ನಾಗಿಸುವುದು ಅತ್ಯಾವಶ್ಯಕವಾಗಿರುತ್ತದೆ. ಆದ್ದರಿಂದ, ಸದರಿ ಉಲ್ಲೇಖದ ಪ್ರಕಾರ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು ಇವರು ನಿರ್ದೇಶಿಸಿದಂತೆ, ಈಗಾಗಲೇ ಸ್ಥಾಪಿತವಾಗಿರುವ ಹಳೆ ವಿದ್ಯಾರ್ಥಿಗಳ ಸಂಘವನ್ನು ಪುನರ್ ಸ್ಥಾಪಿಸಿ ವಿದ್ಯಾರ್ಥಿ ಸಂಪರ್ಕ ಕಚೇರಿಯನ್ನು ಕರ್ನಾಟಕ ವಿಶ್ವವಿದ್ಯಾಲಯದ Silver Jubilee (CDC Section Building) ಕಟ್ಟಡದಲ್ಲಿ ಸ್ಥಾಪಿಸಲಾಗಿರುತ್ತದೆ. ಸಂಘಕ್ಕೆ ವಿದ್ಯಾರ್ಥಿಗಳನ್ನು ಸದಸ್ಯರನ್ನಾಗಿಸುವ ವಿಷಯ ಕುರಿತು ಉಲ್ಲೇಖ 3ರ ಪ್ರಕಾರ ದಿನಾಂಕ: 14.07.2023 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಾಚಾರ್ಯರ ಸಭೆಯಲ್ಲಿ ಸಮಗ್ರವಾಗಿ ಚರ್ಚಿಸಿ ಈಗಾಗಲೇ ವಿವಿಧ ಸೆಮಿಸ್ಟರ್‌ಗಳಲ್ಲಿ ಅಭ್ಯಾಸಿಸುತ್ತಿರುವ ಎಲ್ಲ ವಿದ್ಯಾರ್ಥಿಗಳನ್ನು ಸಂಘದ ಸದಸ್ಯರನ್ನಾಗಿ ನೊಂದಾಯಿಸಲು ಸಭೆಯಲ್ಲಿ ಒಮ್ಮತದಿಂದ ನಿರ್ಣಯ ಕೈಗೊಳ್ಳಲಾಯಿತು. ಮುಂದುವರೆದು, ಉಲ್ಲೇಖ 4 ರನ್ವಯ ನಿರ್ಣಯಿಸಿದಂತೆ ಹಾಗೂ ಪ್ರಾಚಾರ್ಯರ ಸಭೆಯಲ್ಲಿ ಒಪ್ಪಿದಂತೆ ಪ್ರತಿ ವಿದ್ಯಾರ್ಥಿಗೆ ರೂ. 300/– ನೊಂದಣಿ ಶುಲ್ಕವನ್ನು ಆಕರಿಸುವುದು.

ಆದ್ದರಿಂದ, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ, ಸ್ನಾತಕೋತ್ತರ ಕೇಂದ್ರ (ಗದಗ, ಕಾರವಾರ, ಹಾವೇರಿ) ಆಡಳಿತಾಧಿಕಾರಿಗಳು, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ (ಹಾವೇರಿ ಜಿಲ್ಲೆಯನ್ನೊಳಗೊಂಡು) ಪ್ರಾಚಾರ್ಯರುಗಳು ತಮ್ಮ ವಿಭಾಗ / ಕೇಂದ್ರ / ಮಹಾವಿದ್ಯಾಲಯಗಳಲ್ಲಿ ಅಭ್ಯಾಸಿಸುತ್ತಿರುವ ವಿದ್ಯಾರ್ಥಿಗಳಿಂದ ಈ ಕೆಳಗಿನಂತೆ ಶುಲ್ಕವನ್ನು ಪದವಿವಾರು, ಸೆಮಿಸ್ಟರ್‌ವಾರು ಆಕರಿಸಲು ಈ ಮೂಲಕ ಕೋರಲಾಗಿದೆ.

**(ಅ) 3 / 4ನೇ ವರ್ಷದ ಸ್ನಾತಕ ಪದವಿ ವಿದ್ಯಾರ್ಥಿಗಳಿಗೆ:**

1. 2022–23ನೇ ಸಾಲಿನಲ್ಲಿ 8ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
2. 2022–23ನೇ ಸಾಲಿನಲ್ಲಿ 6ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
3. 2022–23ನೇ ಸಾಲಿನಲ್ಲಿ 4ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
4. 2022–23ನೇ ಸಾಲಿನಲ್ಲಿ 2ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
5. 2023–24ನೇ ಸಾಲಿನಲ್ಲಿ 1ನೇ ಸೆಮಿಸ್ಟರ್‌ಗೆ ಪ್ರವೇಶ ಪಡೆದುಕೊಂಡ ವಿದ್ಯಾರ್ಥಿಗಳು (**ಹಾವೇರಿ ಜಿಲ್ಲೆ ಹೊರತುಪಡಿಸಿ**).

**(ಬ) 2 / 3ನೇ ವರ್ಷದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ:**

1. 2022–23ನೇ ಸಾಲಿನಲ್ಲಿ 6ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
2. 2022–23ನೇ ಸಾಲಿನಲ್ಲಿ 4ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).
3. 2022–23ನೇ ಸಾಲಿನಲ್ಲಿ 2ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).

ಪು.ತಿ.ನೋ.

**(ಕ) 1 ವರ್ಷದ ಡಿಪ್ಲೋಮಾ / ಸರ್ಟಿಫಿಕೇಟ್ ತರಗತಿಗಳ ವಿದ್ಯಾರ್ಥಿಗಳಿಗೆ:**

1. 2022-23ನೇ ಸಾಲಿನಲ್ಲಿ 2ನೇ ಸೆಮಿಸ್ಟರ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).

**(ಡ) ಪಿಎಚ್.ಡಿ ವಿದ್ಯಾರ್ಥಿಗಳು.**

1. ಪ್ರಸ್ತುತ ಪಿಎಚ್.ಡಿ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು(ಎಲ್ಲ ನಾಲ್ಕು ಜಿಲ್ಲೆಗೊಳಪಟ್ಟು).

ಈ ಮೇಲಿನಂತೆ, ಶುಲ್ಕಗಳನ್ನು ಆಕರಿಸಿ ಒಟ್ಟು ಶುಲ್ಕವನ್ನು ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಲಭ್ಯವಿರುವ Alumni Portal ನಲ್ಲಿರುವ College / K.U. PG Department Registration ನಲ್ಲಿ ಕ್ಲಿಕ್ ಮಾಡಿ ಮಾಹಿತಿಯನ್ನು ಭರ್ತಿ ಮಾಡಿ ಪದವಿವಾರು / ಸೆಮಿಸ್ಟರ್‌ವಾರು ಶುಲ್ಕವನ್ನು Pay ಅನ್ನು ಕ್ಲಿಕ್ ಮಾಡಿ ಶುಲ್ಕವನ್ನು ಭರಿಸುವುದು. ಶುಲ್ಕ ಭರಿಸಿದ ರಶೀದಿಯನ್ನು ಹಾಗೂ ವಿದ್ಯಾರ್ಥಿಗಳ ಯಾದಿಯನ್ನು ಕೂಡಾ Upload ಮಾಡಿ Submit ಅನ್ನು ಕ್ಲಿಕ್ ಮಾಡುವುದು. ಮುಂದುವರೆದು, ಸದರಿ ಶುಲ್ಕ ಭರಿಸಿದ ರಶೀದಿ ಮತ್ತು ವಿದ್ಯಾರ್ಥಿಗಳ ಯಾದಿಯನ್ನು **ದಿನಾಂಕ: 07.08.2023** ರೊಳಗಾಗಿ ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ, Silver Jubilee ಕಟ್ಟಡ (CDC Section Building) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇಲ್ಲಿಗೆ ಸಲ್ಲಿಸುವುದು.

ಶುಲ್ಕವನ್ನು ಈ ಮೇಲಿನಂತೆ ಪಾವತಿಸಲು ತಾಂತ್ರಿಕ ತೊಂದರೆಗಳೇನಾದರು ಉದ್ಭವಿಸಿದಲ್ಲಿ ಶುಲ್ಕವನ್ನು Alumni Association, Karnatak University ಹೆಸರಿನಲ್ಲಿ ಡಿ.ಡಿ. ಮುಖಾಂತರ ಅಥವಾ Alumni Association, Karnatak University ದ SBI Account No. 30290837214, IFS Code: SBIN0001728 ಗೆ RTGS ಮುಖಾಂತರ ಸಂದಾಯ ಮಾಡುವುದು. ಸದರಿ ಶುಲ್ಕದ ಡಿ.ಡಿ. / RTGS ಚಲನ್ ಹಾಗೂ ವಿದ್ಯಾರ್ಥಿಗಳ ಯಾದಿಗಳನ್ನು ಈ ಮೇಲಿನ ವಿಳಾಸಕ್ಕೆ ಸಲ್ಲಿಸುವುದು.

ಮುಂದುವರೆದು, ಕರ್ನಾಟಕ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘದ ಧ್ಯೇಯೋದ್ದೇಶ, ಚಟುವಟಿಕೆ ಮತ್ತಿತರ ವಿಷಯಕ್ಕೆ www.kud.ac.in/alumni ನ್ನು ಸಂಪರ್ಕಿಸುವುದು.

**ವಿಶೇಷ ಸೂಚನೆ:**

1. ಈ ಮೇಲಿನಂತೆ ನೊಂದಣಿಗೊಂಡ ವಿದ್ಯಾರ್ಥಿಗಳ ಸದಸ್ಯತ್ವವು Student Membership ಎಂದು ಪರಿಗಣಿಸಲಾಗುವುದು.
2. ವಿದ್ಯಾರ್ಥಿಗಳು ಯಾವುದೇ ಹಂತದಲ್ಲಿ ಒಂದು ಬಾರಿ ಕರ್ನಾಟಕ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿಗಳ ಸಂಘಕ್ಕೆ ನೊಂದಣಿಯಾದಲ್ಲಿ ಮುಂಬರುವ ವರ್ಷಗಳಲ್ಲಿ ಸದರಿ ಪದವಿಯು ಪೂರ್ಣಗೊಳ್ಳುವವರೆಗೆ ಶುಲ್ಕಗಳನ್ನು ಆಕರಿಸತಕ್ಕದ್ದಲ್ಲಾ.
3. ಮುಂದಿನ ದಿನಗಳಲ್ಲಿ, ಪ್ರತಿ ಪದವಿಯ ಮೊದಲನೆಯ ಸೆಮಿಸ್ಟರ್ ಪ್ರವೇಶದ ಹಂತದಲ್ಲಿ ಮಾತ್ರ ನೊಂದಣಿ ಶುಲ್ಕ ಆಕರಿಸತಕ್ಕದ್ದು.
4. ಸದರಿ ಪದವಿ ಮುಕ್ತಾಯಗೊಂಡು ಮುಂದಿನ ಹಂತದ ಪದವಿಗಳಿಗೆ ಪ್ರವೇಶ ಪಡೆದಕೊಂಡಲ್ಲಿ Student Membershipನ್ನು ಪರಿಷ್ಕೃತ ಶುಲ್ಕವನ್ನು ಆಕರಿಸಿ ನವೀಕರಿಸಲಾಗುವುದು.
5. Student Membership ಹೊಂದಿದ ವಿದ್ಯಾರ್ಥಿಗಳಿಗೆ ಪ್ರಸ್ತುತ ಪ್ರವೇಶ ಪಡೆದುಕೊಂಡ ಪದವಿ ಮುಕ್ತಾಯವಾಗುವವರಿಗೂ ಗುಂಪು ವಿಮೆ ಸೌಲಭ್ಯವಿರುತ್ತದೆ.

ಕುಲಸಚಿವರು

ಗೆ,

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು, ಸ್ನಾತಕೋತ್ತರ ಕೇಂದ್ರ (ಗದಗ, ಕಾರವಾರ, ಹಾವೇರಿ) ಆಡಳಿತಾಧಿಕಾರಿಗಳು, ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ (ಹಾವೇರಿ ಜಿಲ್ಲೆಯನ್ನೊಳಗೊಂಡು) ಪ್ರಾಚಾರ್ಯರುಗಳು.

**ಪ್ರತಿ:**

1. ಕಾರ್ಯದರ್ಶಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಹಳೆ ವಿದ್ಯಾರ್ಥಿಗಳ ಸಂಘ, Silver Jubilee ಕಟ್ಟಡ (CDC Section Building) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
2. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಕ.ವಿ.ವಿ. ಧಾರವಾಡ.
3. ನಿರ್ದೇಶಕರು, ಐ.ಟಿ. ಶಾಖೆ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು / ಕುಲಸಚಿವರ ಆಪ್ತ ಕಾರ್ಯದರ್ಶಿಗಳು / ಕುಲಸಚಿವರು (ಮೌಲ್ಯಮಾಪನ) ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.